ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ: ಆಯುಕ್ತರು/ಆಕುಕ/ಆಪ್ತ/ 38 /2020-21 Date: 25/08/2020

**ಸುತ್ತೋಲೆ**

ವಿಷಯ: ಆರೋಗ್ಯ ಮಿತ್ರರನ್ನು ರೋಗಿಗಳಿರುವ ವಾರ್ಡ್ / ಕಕ್ಷೆ (Red Zone) ಗಳಿಗೆ ನಿಯೋಜಿಸದಿರುವ ಬಗ್ಗೆ.

ಉಲ್ಲೇಖ: ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇವರ ಪತ್ರ ಸಂಖ್ಯೆ:HFW/SAST/MM/34/2019-20(III) ದಿನಾಂಕ:19.08.2020.

- - -

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವತಿಯಿಂದ ತೈನಾತಿಸಿರುವ "ಆರೋಗ್ಯ ಮಿತ್ರ" ಸಿಬ್ಬಂದಿಯವರು ಕೋವಿಡ್ ಮತ್ತು ಕೋವಿಡೇತರ ಚಿಕಿತ್ಸೆಗೆ ಸಂಬಂಧಿಸಿದಂತೆ ಆಸ್ಪತ್ರೆಗೆ ಭೇಟಿ ನೀಡುವ ಸಾರ್ವಜನಿಕರು/ರೋಗಿಗಳಿಗೆ ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ ಯೋಜನೆಯಡಿ ಚಿಕಿತ್ಸೆ ಪಡೆಯುವ ಸಂಬಂಧ ಮಾಹಿತಿ ದೊರಕಿಸಿಕೊಡುವುದರ ಜೊತೆಗೆ ಆಸ್ಪತ್ರೆಗಳಿಗೆ ಸರ್ಕಾರದಿಂದ ಭರಿಸಬೇಕಾದ ವೆಚ್ಚಗಳಿಗೆ Pre-authorization (ಪೂರ್ವಾನುಮತಿ) ಪಡೆಯಲು ಹಾಗೂ ಅದಕ್ಕೆ ಸಂಬಂಧಿಸಿದ ಮತ್ತು ಆಸ್ಪತ್ರೆಯ ಬಿಲ್ಲುಗಳಿಗೆ ಬೇಕಾಗುವ ದಾಖಲೆಗಳನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್.ಗೆ ಒದಗಿಸುವ ಸಂಬಂಧ ಅಗತ್ಯ ಸಹಾಯ ಮತ್ತು ಸಮನ್ವಯ ಸಾಧಿಸುವುದು ಅವರ ಜವಾಬ್ದಾರಿಯಾಗಿರುತ್ತದೆ.

ಸಾಮಾನ್ಯವಾಗಿ 'ಆರೋಗ್ಯ ಮಿತ್ರ' ಸಿಬ್ಬಂದಿಗಳು ಸ್ವಾಗತ ಕಕ್ಷೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅವರಿಗೆ ಯಾವುದೇ PPE ಕಿಟ್ ಗಳನ್ನು ಒದಗಿಸಿರುವುದಿಲ್ಲ ಮತ್ತು ಅವರು ಯಾವುದೇ ಚಿಕಿತ್ಸೆ ಸಂಬಂಧಿಸಿದ ತರಬೇತಿ ಪಡೆದಿರುವುದಿಲ್ಲ. ಅಗತ್ಯ ದಾಖಲೆಗಳನ್ನು ಪಡೆಯಲು ಅವರನ್ನು ರೋಗಿಗಳಿರುವ ಕಕ್ಷೆಗಳಿಗೆ / ವಾರ್ಡುಗಳಿಗೆ ಕಳುಹಿಸಿದರೆ ಸೋಂಕು ತಗುಲುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.

ಕಾರಣ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆರೋಗ್ಯ ಮಿತ್ರರನ್ನು ಯಾವುದೇ ಕಾಣಕ್ಕೂ ರೋಗಿಗಳಿರುವ ವಾರ್ಡ್ / ಕಕ್ಷೆ (Red Zone) ಗಳಿಗೆ ಕಳುಹಿಸಬಾರದೆಂದು ಈ ಮೂಲಕ ಸೂಚಿಸಿದೆ.

**ಆಯುಕ್ತರು,**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

ಪ್ರತಿಯನ್ನು.

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು/ ಜಿಲ್ಲಾ ಶಸ್ತ್ರಚಿಕಿತ್ಸಕರುಗಳು/ ತಾಲ್ಲೂಕು ಆರೋಗ್ಯಾಧಿಕಾರಿಗಳು/ ಆಡಳಿತ ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಕೇಂದ್ರಗಳು.

3ನೇ ಮಹಡಿ, ಐಪಿಪಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು - 560 009.